156ನೇ ಸಿ=72 (91)
LKK
1411

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ ರವಿ ಇವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ:

ವಿಷಯ: "ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಮಹಿಳಾ ಪೂರಕ ಪೌಷ್ಠಿಕ ಆಹಾರ ಉತ್ಪಾದನಾ ಕೇಂದ್ರ (ಎಂ.ಎಸ್.ಪಿ.ಟಿ.ಸಿ)ದ ಮೂಲಕ ಮಾತ್ರ ಪೂರೈಸುವಂತೆ ಮತ್ತು ಈ ಕೇಂದ್ರಗಳಿಗೆ ಕೇವಲ ತಾಂತ್ರಿಕ ಸಲಹೆಯನ್ನು ಮಾತ್ರ ನೀಡಲು ಬಿ.ಐ.ಎಸ್. ಅನುಮೋದಿತ 3 ಮಹಿಳಾ ಸ್ವಸಹಾಯ ಸಂಘಗಳನ್ನು ಗುರುತಿಸುವಂತೆ ಉಚ್ಚ ನ್ಯಾಯಾಲಯ ಸೂಚನೆ ನೀಡಿತ್ತು. ಸರ್ಕಾರ ಹರಿಹರೇಶ್ವರ, ರೇಣುಕಾದೇವಿ ಮತ್ತು ಸಂಜಿವಿಣಿ ಎಂಬ ಮೂರು ಸ್ವಸಹಾಯ ಗುಂಪುಗಳ ಮೂಲಕ ಆಹಾರ ಸಾಮಗ್ರಿಗಳನ್ನು ಪೂರೈಕೆ ಮಾಡುತ್ತಿದೆ. ಈ ಹಿಂದೆ ತೀರಾ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸಿ ಕಪ್ಪು ಪಟ್ಟಿಗೆ ಸೇರಿದ್ದ ಮೆ. ಕ್ರಿಸ್ಟಿ ಪ್ರೈಡ್‌ಗ್ರಾಂ ಎಂಬ ಸಂಸ್ಥೆಯ ಅಧೀನದಲ್ಲಿರುವ 3 ಮಹಿಳಾ ಸ್ವಸಹಾಯ ಗುಂಪುಗಳ ಆಡಳಿತ ಮತ್ತು ಹಣಕಾಸಿನ ವ್ಯವಹಾರದಲ್ಲಿ ಕಂಪನಿ ನೇರವಾಗಿ ಭಾಗಿಯಾಗಿದ್ದು, ಅವರ ಮೂಲಕ ಅಂಗನವಾಡಿಗಳಿಗೆ ಕಳಪೆ ಆಹಾರ ಸಾಮಗ್ರಿಗಳನ್ನು ಪೂರೈಕೆ ಮಾಡುತ್ತಿರುವ ಆರೋಪವಿದೆ. ಪೂರೈಕೆಯಾಗುತ್ತಿರುವ ಆಹಾರ ಪದಾರ್ಥಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು ಮತ್ತು ಬಳಸಲು ಯೋಗ್ಯವಲ್ಲ ಎಂದು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಪ್ರಯೋಗಾಲಯವು ವರದಿ ನೀಡಿದ್ದು, ವಿಸ್ತೃತ ತನಿಖೆಯ ಅಗತ್ಯವಿದೆ ಎಂದು ಅಧಿಕಾರಿಗಳು ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

ಸರ್ಕಾರ ನ್ಯಾಯಾಲಯದ ಸೂಚನೆಯನ್ನು ಪಾಲಿಸುವ ನೆಪದಲ್ಲಿ 3 ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಆಹಾರ ಸಾಮಗ್ರಿಗಳನ್ನು ಪೂರೈಕೆ ಮಾಡುತ್ತಿದ್ದು, ಈ ಸಂಘಗಳ ಜೊತೆ ಮಾಡಿಕೊಂಡಿರುವ ಒಡಂಬಡಿಕೆ/ಕರಾರಿನ ಕುರಿತು ಮಾಹಿತಿ ಬಹಿರಂಗಪಡಿಸಿಲ್‌ಲ. ನ್ಯಾಯಾಲಯದ ಸೂಚನೆಯಂತೆ ತಾಂತ್ರಿಕ ಸಲಹೆಯನ್ನಷ್ಟೇ ನೀಡಬೇಕಿದ್ದ ಬಿ.ಐ.ಎಸ್. ಸಂಸ್ಥೆಯ ಅಧೀನದ 3 ಮಹಿಳಾ ಸ್ವಸಹಾಯ ಗುಂಪುಗಳು ಕಳಪೆ ಆಹಾರ ಸಾಮಗ್ರಿ ಪೂರೈಕೆ ಆಗುತ್ತಿದ್ದರೂ ಸಂಬಂಧಪಟ್ಟವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವ ಕುರಿತು.

******

ಉತ್ತರ:- ಘನ ಸರ್ವೋಚ್ಚ ನ್ಯಾಯಾಲಯ ಹಾಗೂ ಘನ ಉಚ್ಚ ನ್ಯಾಯಾಲಯಗಳ ಆದೇಶದ ಅನುಷ್ಠಾನಕ್ಕಾಗಿ ಬಿ.ಐ.ಎಸ್. ಪರವಾನಗಿ ಹೊಂದಿರುವ ಅರ್ಹ ಮಹಿಳಾ ಗುಂಪುಗಳೊಂದಿಗೆ ಪೂರಕ ಪೌಷ್ಟಿಕ ಆಹಾರದ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಹಾಗೂ ತಾಂತ್ರಿಕ ನೆರವು ಪಡೆಯಲು ಸಂಘ ಸಂಸ್ಥೆಗಳ ನೋಂದಣಿ ಕಾಯಿದೆ 1960ರಡಿ ನೋಂದಣಿಯಾದ ಎಂ.ಎಸ್.ಪಿ.ಸಿ.ಗಳು ಒಪ್ಪಂದ ಮಾಡಿಕೊಂಡಿರುತ್ತವೆ. ಇದರಿಂದಾಗಿ ಸರ್ಕಾರಕ್ಕೆ ಯಾವುದೇ ಹೆಚ್ಚಿನ ಆರ್ಥಿಕ ಹೊರೆಯಿರುವುದಿಲ್ಲ. 3ಮಹಿಳಾ ಸ್ವಸಹಾಯ ಗುಂಪುಗಳೊಂದಿಗೆ ಇಲಾಖೆಯು ಯಾವುದೇ ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ

2008 ರಿಂದ ಇಲ್ಲಿಯವರೆಗೂ 137 ಎಂ.ಎಸ್.ಪಿ.ಸಿ.ಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಹಾಲಿ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ಸಾಮಗ್ರಿಗಳನ್ನು, ಎಂ.ಎಸ್.ಪಿ.ಸಿ.ಗಳೇ ಸರಬರಾಜು ಮಾಡುತ್ತಿವೆ.

ಮೆ|| ಕ್ರಿಸ್ಟಿಪ್ರೈಡ್ ಸಂಸ್ಥೆಯು 2008 ರಿಂದ 2012ರವರೆಗೆ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ಸರಬರಾಜು ಮಾಡಿದ್ದು, ಸದರಿ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಸೇರಿಸಿರುವುದರ ಕುರಿತು ಹಾಗೂ ಸದರಿ ಕಂಪನಿ ಅಧೀನದಲ್ಲಿ 03 ಮಹಿಳಾ ಗುಂಪುಗಳಿರುವುದ್ದಕ್ಕೆ, ಇಲಾಖೆಯಲ್ಲಿ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ.

ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳಿಗೆ ಆಹಾರವನ್ನು ವಿತರಿಸುವ ಮುನ್ನ ಗುಣಮಟ್ಟದ ಪರೀಕ್ಷೆಯನ್ನು NABL (National Accreditation Board for Testing and Calibration Laboratories)ನಿಂದ ಮಾನ್ಯತೆ ಪಡೆದ ಪ್ರಯೋಗಾಲಯಗಳ ಮೂಲಕ ಪ್ರತಿ ಮಾಹೆ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ. ತದನಂತರ ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಆಹಾರ ವಿತರಿಸುವ ಮುನ್ನ ಹಾಗೂ ವಿತರಿಸಿದ ನಂತರ ಎಲ್ಲಾ ಹಂತಗಳಲ್ಲಿ ಆಹಾರ ಸಾಮಗ್ರಿಗಳ ಮಾದರಿಗಳ ಗುಣಮಟ್ಟ ಪರೀಕ್ಷೆ ನಡೆಸಲಾಗುತ್ತಿದೆ.

ಇದಲ್ಲದೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ FSSAI ಪ್ರಯೋಗಾಲಯಗಳು, Random ಆಗಿ ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಟಿಕ ಆಹಾರದ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸುತ್ತಿವೆ. 2024-25ನೇ ಸಾಲಿನಲ್ಲಿ 1,329 ಮಾದರಿಗಳನ್ನು ಮತ್ತು 2025-26ನೇ ಸಾಲಿನಲ್ಲಿ ಈವರೆವಿಗೆ 674 ಪೂರಕ ಪೌಷ್ಟಿಕ ಆಹಾರದ ಮಾದರಿಗಳನ್ನು ಅಂಗನವಾಡಿ ಕೇಂದ್ರಗಳಿಂದ ಸಂಗ್ರಹಿಸಿ ಪರೀಕ್ಷೆ ನಡೆಸಲಾಗಿದೆ. ಆದರೆ, ಈವರೆಗೆ ಯಾವುದೇ ಪ್ರತಿಕೂಲ ವರದಿಯು ಸ್ವೀಕೃತವಾಗಿರುವುದಿಲ್ಲ.

ಅಂಗನವಾಡಿಗಳಿಗೆ ಕಳಪೆ ಆಹಾರ ಸಾಮಗ್ರಿಗಳನ್ನು ಪೂರೈಕೆ ಮಾಡುತ್ತಿರುವ ಬಗ್ಗೆ ವಿಸ್ತೃತ ತನಿಖೆ ಅಗತ್ಯ ಎಂದು ಇಲಾಖೆಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಯಾವುದೇ ಪತ್ರ ಬರೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಅಂಗನವಾಡಿ ಕೇಂದ್ರಗಳಿಗೆ ಸಮರ್ಪಕವಾಗಿ ಆಹಾರ ಸರಬರಾಜು ಮಾಡದ ದೂರಿನ ಹಿನ್ನೆಲೆಯಲ್ಲಿ, ಗುಂಡ್ಲುಪೇಟೆ ಎಂ.ಎಸ್.ಪಿ.ಸಿ., ಧಾರವಾಡ ಎಂ.ಎಸ್.ಪಿ.ಸಿ. ಮತ್ತು ದೇವನಹಳ್ಳಿ ಎಂ.ಎಸ್.ಪಿ.ಸಿ.ಗಳ ಕಾರ್ಯನಿರ್ವಹಣೆ ಅಮಾನತ್ತಿಲ್ಲಿರಿಸಲಾಗಿತ್ತು. ಸದರಿ ಎಂ.ಎಸ್.ಪಿ.ಸಿ.ಗಳು ತಮ್ಮ ನ್ಯೂನ್ಯತೆ/ಲೋಪದೋಷಗಳನ್ನು ಸರಿಪಡಿಸಿಕೊಂಡಿರುವ ಕುರಿತು ಸವಿವರ ಅನುಪಾಲನಾ ವರದಿ ಸಲ್ಲಿಸಿದ ನಂತರವೇ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪೂರೈಕೆ ಮಾಡಲು ಅನುಮತಿ ನೀಡಲಾಗಿದೆ.

ಒಟ್ಟಾರೆ 2008 ರಿಂದ ಕಾರ್ಯನಿರ್ವಹಿಸುತ್ತಿರುವ 137 ಎಂ.ಎಸ್.ಪಿ.ಸಿ.ಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಂದಿಗೂ ಸಹ ಎಂ.ಎಸ್.ಪಿ.ಸಿ.ಗಳಿಂದಲೇ ಅಂಗನವಾಡಿಗಳಿಗೆ ಆಹಾರ ಸರಬರಾಜಾಗುತ್ತಿದೆ. ಎಲ್ಲಾ ಹಂತದಲ್ಲಿ ಸರಬರಾಜಾದ ಆಹಾರ ಸಾಮಗ್ರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ಸರಿಯಾಗಿ ಆಹಾರ ಸಾಮಗ್ರಿಗಳನ್ನು ಪೂರೈಸಲಾರದ ಎಂ.ಎಸ್.ಪಿ.ಸಿ.ಗಳ ವಿರುದ್ಧ ಕೂಡಲೇ ನಿರ್ದಾಕ್ಷಿಣ್ಯವಾಗಿ ಸೂಕ್ತ ಕಾನೂನು ಕ್ರಮವಹಿಸಲಾಗುತ್ತಿದೆ. ಆಹಾರ ಸರಬರಾಜಿನಲ್ಲಿ ಪಾರದರ್ಶಕತೆ ಕಾಪಾಡಲು ರಾಜ್ಯದಲ್ಲಿ Face Recognition System(FRS) ಅನ್ನು ಸಂಪೂರ್ಣವಾಗಿ ಅಳವಡಿಸಲಾಗಿದೆ.

ಸಂಖ್ಯೆ: ಮಮಇ 212 ಐಸಿಡಿ 2025

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು.